ಓ.ಎಸ್. ನಂಃ 159/2019
ಪಿ.ಡಬ್ಲ್ಯೂ-1 (ಶಿವಲೀಲಾ)

ದಿನಾಂಕ: 22-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಬಿ.ಕೆ.ಕೆ. 1ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು 10ನೇ ತರಗತಿವರೆಗು ಓದಿದ್ದೇನೆ. ಈ ದಾವೆ ಬಗ್ಗೆ ನನಗೆ ಸಂಪೂರ್ಣವಾಗಿ ಮಾಹಿತಿ ಇದೆ. ಈ ದಾವೆಯಲ್ಲಿ ನಾನು ನಮ್ಮ ಆಸ್ತಿ ನಮಗೆ ಬೇಕು ಎಂದು ಕೇಳಿಕೊಂಡಿದ್ದೇನೆ. ನಾನು ಈ ದಾವೆಯನ್ನು ನಮ್ಮ ತಂದೆಯ ಆಸ್ತಿ ಮೇಲೆ ಮಾಡಿದ್ದೇನೆ. ಎಷ್ಟು ಆಸ್ತಿಗಳಿವೆ ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ.

2. ನನ್ನ ಮದುವೆ 2007ರಲ್ಲಿ ಆಗಿರುತ್ತದೆ. ನನ್ನ ಮದುವೆಯಾಗಿ ಈಗ 19 ವರ್ಷಗಳಾಗಿದೆ ಎಂದರೆ ಸರಿ. ಮದುವೆಯಾದಾಗಿನಿಂದ ನಾನು ನನ್ನ ಗಂಡನ ಮನೆಯಲ್ಲಿಯೆ ವಾಸ ಇದ್ದೇನೆ ಎಂದರೆ ಸರಿ. ಮಸಗುಪ್ಪಿ ಗ್ರಾಮದಲ್ಲಿ ನನ್ನ ಗಂಡನಿಗೆ ಜಮೀನುಗಳು ಇವೆ ಎಂದರೆ ಸರಿ.

3. ದಾವಾ ಆಸ್ತಿಗಳು ನನ್ನ ತಂದೆ 1ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇವೆ ಮತ್ತು ಅವರೇ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಾಯಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ತಮ್ಮ ಸಹ ತೀರಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಮ್ಮನಿಗೆ ಮದುವೆ ಆಗಿರಲಿಲ್ಲ. ನನ್ನ ತಾಯಿ ಮೃತಪಟ್ಟ ನಂತರ ನನ್ನ ತಂದೆಗೆ ನೋಡಿಕೊಳ್ಳುವವರು ಯಾರು ಇಲ್ಲದೇ ಇದ್ದುದ್ದರಿಂದ ನನ್ನ ತಂದೆ ಇನ್ನೊಂದು ಮದುವೆ ಆಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ

ಮಹಾದೇವಿ ಎನ್ನುವವರನ್ನು ಮದುವೆಯಾಗಿದ್ದು ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿದಾರರು ತಮ್ಮ ತಂದೆ ಮಹಾದೇವಿ ಇವರನ್ನು ಮದುವೆಯಾದ ಬಗ್ಗೆ ತಮಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

4. ನನ್ನ ತಾಯಿ ಮತ್ತು ನನ್ನ ತಮ್ಮ ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ತಾಯಿ ಮತ್ತು ತಮ್ಮ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಕ್ಕಾಗಿ ಪರಿಹಾರ ಕೋರಿ ನನ್ನ ತಂದೆ ಅರ್ಜಿ ಸಲ್ಲಿಸಿದ್ದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ. ನನ್ನ ತಮ್ಮ ಮತ್ತು ತಾಯಿ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದರ ಪರಿಹಾರದಲ್ಲಿ ನನಗೆ ಪಾಲು ಕೇಳಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

5. ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮೇಲಿನ ಸಿಟ್ಟಿನಿಂದ ನಾನು ಈ ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ.ಎಸ್.ಕೆ.ಎಚ್. ಪ್ರತಿವಾದಿ 3ಎ ಯಿಂದ 3ಸಿ ರವರ ಪರ ವಕೀಲರಿಂದಃ</u>**

ನನ್ನ ಅಜ್ಜ ಬಾಳಪ್ಪನಿಗೆ ಸಿದ್ದಪ್ಪ ಅಂದರೆ ಪ್ರತಿವಾದಿ 2, ಕಾಡಪ್ಪ,

ಅಂದರೆ ಪ್ರತಿವಾದಿ 3, ಶಿವಲಿಂಗಪ್ಪ ಅಂದರೆ ಪ್ರತಿವಾದಿ 1, ಬಸವಣ್ಣೆಪ್ಪ ಅಂದರೆ ಪ್ರತಿವಾದಿ 4 ಎಂದು 04 ಗಂಡು ಮಕ್ಕಳು ಎಂದರೆ ಸರಿ. ಈಗ 3ನೇ ಪ್ರತಿವಾದಿ ಮೃತಪಟ್ಟಿದ್ದು ಅವರ ವಾರಸುದಾರರು ಈ ದಾವೆಯಲ್ಲಿ ಸೇರಿಸಲಾಗಿದೆ ಎಂದರೆ ಸರಿ. ದಾವಾ ಆಸ್ತಿಗಳನ್ನು ಪ್ರತಿವಾದಿ 1 ರಿಂದ 4 ರವರು ಸೇರಿ ಉಳುಮೆ ಮಾಡುತ್ತಾರೆ ಎಂದರೆ ಸರಿ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ